# ಕರ್ನಾಟಕ ಪೊಲೀಸ್ ಇತಿಹಾಸ

## ಪೀಠಿಕೆ.

ಕರ್ನಾಟಕದಾದ್ಯಂತ ಈ ಮಂದಿಯನ್ನು ಈಗ ಆರಕ್ಷಕರೆಂದು ಕರೆಯುತ್ತಾರೆ. ಆದರೆ ಇವರು ರಾಜ್ಯದ ಒಂದೊಂದು ಭಾಗದಲ್ಲಿ ಒಂದೊಂದು ಹೆಸರಿನಿಂದ ಕರೆಯುವ ಕಾಲವಿತ್ತು. ತೋಟಿಗಳು, ತಳವಾರು, ಉಂಬಳಿದಾರರು, ಕಟ್ಟುಬಿಡಿ, ನೀರಗಂಟಿ ಮುಂತಾದವರೆಲ್ಲ ಒಮ್ಮೆ ಈಗ ಆರಕ್ಷಕರು ನಿರ್ವಹಿಸುತ್ತಿರುವ ಕಾರ್ಯವನ್ನು ನಿರ್ವಹಿಸುತ್ತಿದ್ದುದರ ಜೊತೆಗೆ ಇತರ ಸರ್ಕಾರಿ ಕೆಲಸಗಳು ಸಹ ಮಾಡಬೇಕಿತ್ತು. ಈಗಿರುವ ಪೊಲೀಸ್ ವ್ಯವಸ್ಥೆಗೆ ಅಡಿಪಾಯ ಹಾಕಿದ್ದು, ಹಿಂದೆ ಪ್ರಥಮ ಐಜಿಪಿ ನೇಮಕಗೊಂಡಾಗ, ನಮ್ಮ ಪೊಲೀಸ್ ವ್ಯವಸ್ಥೆಗೆ ನಿಷ್ಪಕ್ಷಪಾತವಾದ ಸಂಸ್ಥೆಯಾಗಿ ಬೆಳೆದು ಹೆಮ್ಮರವಾಗಿದೆ.

## ಇತಿಹಾಸ

**1956** ರಲ್ಲಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂತು, **1985**ರ ನವೆಂಬರ್ **-1** ರಲ್ಲಿ ರಾಜ್ಯದ ಪೊಲೀಸ್ ಪಡೆಯ ಪ್ರಥಮ ಆರಕ್ಷಕ ಮಹಾ ನಿರೀಕ್ಷಕರನ್ನು ನೇಮಕ ಮಾಡಲಾಯಿತು, ಅವರೇ ಶ್ರೀ ಎಲ್ ರಿಕೆಟ್ಸ್, ರಿಕೆಟ್ಸ್ ಆರಕ್ಷಕ ಮಹಾ ನಿರೀಕ್ಷಕ ಅಂದರೆ ಇನಸ್ ಪೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ ಅಧಿಕಾರ ಸ್ವೀಕರಿಸುವುದಕ್ಕೆ ಮುನ್ನ ರಾಜ್ಯದ ರಕ್ಷಣಾಧಿಕಾರಿಗಳಿಗೆ ಈಗಿರುವ ಸ್ಥಾನಮಾನ, ರೂಪ, ಅಧಿಕಾರ ಮುಂತಾದವೇನೂ ಇರಲಿಲ್ಲ. **1838**ನೇ ಇಸವಿಯ ವರದಿಯ ಪ್ರಕಾರ ಪೊಲೀಸರು ನಿರ್ವಹಿಸಬೇಕಾದ ಕಾರ್ಯಗಳನ್ನು ತಳವಾರರು, ತೋಟಿಗಳು, ನೀರಗಂಟಿಗಳು, ಕಾವಲುಗಾರರು, ಅಮರಗಾರರು, ಅಂಕಮಾಲೆ, ಪಟೇಲ, ಶ್ಯಾನುಭೋಗ, ಮುಂತಾದವರು ನಿರ್ವಹಿಸುತ್ತಿದ್ದರು. ಹಳೇ ಮೈಸೂರು ರಾಜ್ಯದಲ್ಲಿ ಅಂದಿನ ರಾಜ ಮಹಾರಾಜರುಗಳ ಆಡಳಿತದಲ್ಲಿ ಪೊಲೀಸ್ ವ್ಯವಸ್ಥೆಯು ವಿಸ್ತಾರವಾಗಿ ಜಾರಿಗೆ ಬಂದಿದೆ.

## ಕಂದಾಚಾರ

ಹಳೇ ಮೈಸೂರು ಸಂಸ್ಥಾನಕ್ಕೆ, ಕೃಷ್ಣರಾಜ ಒಡೆಯರ್ ಮಹಾರಾಜರು ( **1799-1811**) ಬ್ರಿಟೀಶ್ ಸರ್ಕಾರ ಪೂರ್ಣಯ್ಯ ನವರನ್ನು ದಿವಾನರನ್ನಾಗಿ ನೇಮಿಸಿತು. ಹುಕುಂ ನಾಮ ಇಲ್ಲವೇ ಕಂದಾಚಾರ ಪೊಲೀಸ್ ವ್ಯವಸ್ಥೆ ಜಾರಿಗೆ ಬಂತು ಮಹಾರಾಜರ ಸೈನ್ಯ ಪಡೆಎ ( ಇನ್ಫೆಂಟ್ರಿ –ಕಾವಲಿ) ಸೇರಿದ ಜವಾನರು, ಪೇದೆಗಳು ಪೊಲೀಸ್ ಜವಾಬ್ದಾರಿ ವಹಿಸಿಕೊಂಡರು. ಯುರೋಪಿಯನ್ ಸೈನಿಕರೇ ಇದರ ಮೇಲ್ವಿಚಾರಕರು. ತಾಲ್ಲೂಕಿನಲ್ಲಿ ಕಂದಾಯ ಅಧಿಕಾರಿಯಾಗಿದ್ದ ಅಮಾಲ್ದಾರರೇ ( ಈಗಿನ ತಹಸಿಲ್ದಾರ್) ಪೊಲೀಸ್ ಮುಖ್ಯಸ್ಥರು. ಇವರಿಗೆ ಫೌಜದಾರರು, ಸಹಾಯಕರು, ರೈತರಿಂದ ಕಂದಾಯ ವಸೂಲಿ ಕೆಲಸವೂ ಇವರದೇ. ತಳವಾರ ತೋಟಿಗಳು, ಕಾವಲುಗಾರ ಹೀಗೆ ಬೇರೆ ಬೇರೆ ಹೆಸರಿನಲ್ಲಿ ಪೊಲೀಸ್ ವ್ಯವಸ್ಥೆಯನ್ನು ಕರೆಯಲಾಗುತ್ತಿತ್ತು. **1817** ರಲ್ಲಿ ಬಂಗಾಲ ರೆಗ್ಯೂಲೇಷನ್ ಮಾದರಿಯ ಕಾನೂನು ಪದ್ದತಿ ಬಂತು. ಪಟೇಲ್, ಶಾನುಭೋಗರು ಪೊಲೀಸ್ ಜವಾಬ್ದಾರಿ ಹೊತ್ತರು. ಆದರೆ ಇವರಿಗೆ ಸಂಬಳ, ರಜೆ, ವಾಹನ ಸೌಲಭ್ಯ ( ಬಂಡಿ) ಇರಲಿಲ್ಲ. ಇದರ ಬದಲು ಇವರಿಗೆ ಮಹಾರಾಜರಿಂದ ಇನಾಮ್ ( ಭಕ್ಷೀಸ್) ರೂಪದಲ್ಲಿ ಜಮೀನು ಇಲ್ಲವೇ ಆಹಾರ ಧಾನ್ಯ ನೀಡುತ್ತಿದ್ದರು. **1853** ರಲ್ಲಿ ಇಡೀ ದೇಶಾದ್ಯಂತ ಪೊಲೀಸ್ ಶಾಸನ ಜಾರಿಗೆ ಬರುತ್ತಿದ್ದಂತೆಯೇ ಸರ್ ಮಾರ್ಕ್ಸ್ ಕಬ್ಬನ್ ಕಮಿಷನರ್ ಆಗಿ ನೇಮಕಗೊಂಡರು. **08** ಜಿಲ್ಲೆಗಳನ್ನು **03** ಡಿವಿಷನ್ ಗಳಾಗಿ ವಿಂಗಡಿಸಿ, ಜಿಲ್ಲೆ ಗಳಿಗೆ ಜಿಲ್ಲಾಧಿಕಾರಿ ( ಡೆಪ್ಯುಟಿ ಕಮಿಷನರ್ ) ಸೂಪರಿಂಟೆಂಡೆಂಟ್ ರವರ ನೇಮಕ ಮಾಡಲಾಗಿತ್ತು. ಜಿಲ್ಲಾಧಿಕಾರಿ ಇಲ್ಲವೇ ಪೊಲೀಸ್ ಸೂಪರಿಂಟೆಂಡೆಂಟ್ ರವರಿಗೆ ಯಾವುದೇ ತರಬೇತಿ ಇರಲಿಲ್ಲ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯೇ ಪೊಲೀಸ್ ಮುಖ್ಯಸ್ಥ. ಪೊಲೀಸ್ ಸೂಪರಿಂಟೆಂಡೆಂಟ್ ಜಿಲ್ಲಾಧಿಕಾರಿಗೆ ಸಹಾಯಕರಾಗಿದ್ದರು.

## ನ್ಯಾಯಾಂಗ ವ್ಯವಸ್ಥೆ

**1856** ರಲ್ಲಿ ನ್ಯಾಯಾಂಗ ವ್ಯವಸ್ಥೆಗಾಗಿ ಆಲೋಚನೆ ಆಗ ಜ್ಯುಡಿಶಿಯಲ್ ಕಮಿಷನನ್ನರ ನೇಮಕ. ಜ್ಯುಡಿಶಿಯಲ್ ಕಮಿಶನರ್ ರು ಇನ್ಸ್ ಪೆಕ್ಟರ್ ಜನರಲ್ ರವರನ್ನು ನೇಮಿಸಿದರು, **1873** ರಲ್ಲಿ ಅವರಿಗೆ ಸಹಾಯಕರಾಗಿ ಡಿಐಜಿ ಒಬ್ಬರು ನೇಮಕಗೊಂಡರು. ಇದೇ ಅವಧಿಯಲ್ಲಿ ಫಸ್ಟ್ ಕ್ಲಾಸ್ ಇನ್ಸ್ ಪೆಕ್ಟರ್, ಸೆಕೆಂಡ್ ಕ್ಲಾಸ್ ಇನ್ಸ್ಪೆಕ್ಟರ್, ಜಮಾದಾರ್, ದಫೇದಾರ್, ಹುದ್ದೆಗಳನ್ನು ರಚಿಸಲಾಯಿತು. ಜಿಲ್ಲಾಧಿಕಾರಿಗೆ ಶಿರಸ್ತೇದಾರರೇ ಹೆಡ್ ಕ್ವಾಟ್ರಸ್ ಅಸಿಸ್ಟೆಂಟ್,ಪೊಲೀಸ್ ಸಿಬ್ಬಂದಿಗೆ ವೇತನ  ಪಾವತಿ ಇತ್ಯಾದಿ ಇವರ ಕೆಲಸವಾಗಿತ್ತು. ತಾಲ್ಲೂಕಿನಲ್ಲಿ ಅಮಾಲ್ ದಾರರೇ ಪೊಲೀಸ್ ಮುಖ್ಯಾಧಿಕಾರಿಯಾಗಿ ಮುಂದುವರೆದರು, ಫಸ್ಟ್ ಕ್ಲಾಸ್ ಇನ್ಸ್ ಪೆಕ್ಟರ್ ಸೆಕೆಂಡ್ ಕ್ಲಾಸ್ ಇನ್ಸ್ ಪೆಕ್ಟರ್ ರವರಿಗೆ **10** ರೂ ಮನೆ ಭತ್ಯೆಯೊಂದಿಗೆ ಅನುಕ್ರಮವಾಗಿ **50**  ಹಾಗೂ **35** ರೂ ವೇತನ  ನಿಗದಿ ಪಡಿಸಲಾಯಿತು. ಜಮಾದಾರರು, ದಫೇದಾರ ಪೊಲೀಸ್ ಪೇದೆಗಳು ಅನುಕ್ರಮವಾಗಿ **20, 12, 8** ರೂ ವೇತನ ಪಡೆಯಲು ಆರಂಭಿಸಿದರು.

<u>ಪ್ರಥಮ ಐಜಿಪಿ</u>

**1883** ರಲ್ಲಿ ಪೊಲೀಸ್ ವ್ಯವಸ್ಥೆ ಪುನರ್ ರಚಿಸಲು ಆಲೋಚಿಸಿದರು. ಆಗ **1885**ನೇ ನವಂಬರ್ **01** ರಂದು ಎಲ್ ರಿಕೆಟ್ಸ್ ಐಜಿಪಿಯಾಗಿ ನೇಮಕವಾದರು. ಇವರೇ ಹಳೇ ಮೈಸೂರಿನ ಪ್ರಥಮ ಐಜಿಪಿ. ರಿಕೆಟ್ಸ್ ನಂತರ ಅವರ ಸ್ಥಾನದಲ್ಲಿ ಶ್ರೀ ವಿ.ಪಿ ಮಾಧವರಾವ್ ಬಂದರು  ಬೆಂಗಳೂರು, ಮೈಸೂರು ನಗರಗಳಿಗೆ ಪ್ರತ್ಯೇಕ ಪೊಲೀಸ್ ಪದ್ಧತಿ ಜಾರಿಗೆ ತರಲಾಯಿತು. ಬೆಂಗಳೂರು ನಗರದ ಪೊಲೀಸ್ ವ್ಯವಸ್ಥೆಗೆ ಸರ್ಕಾರದ ಹಣ ಖರ್ಚು ಮಾಡಿರು, ಆದರೆ ಮೈಸೂರು ನಗರದ ಪೊಲೀಸ್  ನಿರ್ವಹಣೆಗೆ ಅಲ್ಲಿನ ನಗರಸಭೆ ಹಣ ಖರ್ಚು ಮಾಡಬೇಕಾಯಿತು. ಮೈಸೂರು – ಬೆಂಗಳೂರು ನಗರಗಳ ಕತೆ ಒಂದಾಗಿದ್ದರೇ ಯಳಂದೂರಿನ ಕತೆಯೇ ಬೇರೆ ಯಳಂದೂರು ಜಹಗೀರ್ದಾರರೊಬ್ಬರಿಗೆ ಸೇರಿತ್ತು. ಅಲ್ಲಿನ ಪೊಲೀಸ್ ನಿರ್ವಹಣೆ ಅವರದೇ. ಅವರು ತಮಗೆ ಬೇಕಾದವರಿಗೆ ಪೊಲೀಸ್ ಕೆಲಸ ಒಪ್ಪಿಸುತ್ತಿದ್ದರು. ಅದರ ಖರ್ಚು ಅವರಿಗೆ ಅರ್ಧ ಯಳಂದೂರಿಗೆ ಅಲ್ಲಿಯ ಜಹಾಗೀರ್ ದಾರರೇ ಪೊಲೀಸ್ ಸೂಪರಿಂಟೆಂಡೆಂಟ್. **1884** ರಲ್ಲಿ ಈ ವ್ಯವಸ್ಥೆ ಕೊನೆಗೊಂಡಿತು. ಈ ಮಧ್ಯೆ ಪೊಲೀಸ್ ರ ಶಿಕ್ಷಣ ಕುರಿತು ಗಮನ ನೀಡಲಾಯಿತು. ಅಮಲ್ದಾರರನ್ನು ಬಿಟ್ಟರೇ ಬಹುತೇಕ ಸಿಬ್ಬಂದಿ ನಿರಕ್ಷರಿಗಳು. ಇನ್ನೂ ಅಕ್ಷರ ಅಭ್ಯಾಸ ಮಾಡಿ ಎಂದು ಶ್ರೀ ವಿ.ಪಿ. ಮಾಧವರಾವ್ ಆದೇಶ ನೀಡಿದಾಗ ನಿರಕ್ಷರಿ ಪೊಲೀಸ್ ಸಿಬ್ಬಂದಿ, ಹೋಬಳಿ ಶಾಲೆಗಳಿಗೆ ಹೋಗಲು ಆರಂಭಿಸಿದರು. **1892**  ರಲ್ಲಿ ಬೆಂಗಳೂರಿನಲ್ಲಿ ಜಮಾದಾರ್, ದಫೇದಾರ್, ಪೊಲೀಸ್ ಪೇದೆಗಳಿಗೆ ತರಬೇತಿ ನೀಡುವ ಶಾಲೆ ತಲೆ ಎತ್ತಿನಿಂತಿತ್ತು. ವರ್ಷಕ್ಕೊಂದು ಬಾರಿ ಪರೀಕ್ಷೆ ನಡೆಸಿ  ಪೊಲೀಸ್ ಪೇದೆಗಳ ಭರ್ತಿ ಕೆಲಸವನ್ನು ಅದು ಪ್ರಾರಂಭಿಸಿತು. ಭಡ್ತಿ ಕೊಡಲು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆದವು. ಕಾಲುರುಳಿದಂತೆ ಸಮಸ್ಯೆಗಳೂ ಕಾಣಿಸಿಕೊಂಡವು. ಯಾವ ಕ್ರಮವಿಲ್ಲದೇ ಯಾವ ವಿಧಾನ ಅನುಸರಿಸಬೇಕೆಂಬುದೇ ಗೊತ್ತಿರಲಿಲ್ಲ. ಇಂತಹ ಸಂದರ್ಬದಲ್ಲಿ, ಐಜಿಪಿ ರವರಿಗೆ ಹೆಡ್ ಕ್ವಾರ್ಟಸ್  ಪೊಲೀಸ್ ಇನ್ಸ್ ಪೆಕ್ಟರ್ ಆಗಿದ್ದ, ಶ್ರೀ ಎನ್. ಲಕ್ಷ್ಮಣ ಶಾಸ್ತ್ರಿಗಳು ಪೊಲೀಸರಿಗೆ ಮಾರ್ಗದರ್ಶನ ನೀಡುವ ಕೈಪಿಡಿ ಪ್ರಕಟಿಸಿದರು.

ಮಂತ್ರಿ

**1912** ರಲ್ಲಿ ಐಜಿಪಿ ಆಗಿದ್ದ ಡಿ. ದೇವರಾಜ್ ಅರಸು ವೆಲ್ಲೂರಿಗೆ ಹೋಗಿ ಅಲ್ಲಿಯ ಪೊಲೀಸ್ ತರಬೇತಿ ಶಾಲೆಯ ಶಿಕ್ಷಣ ಪದ್ಧತಿ ಅಭ್ಯಸಿಸಿದರು.  ಇವರ ಕಾಲದಲ್ಲಿ ಬೆಂಗಳೂರು ಪೊಲೀಸ್ ತರಬೇತಿ ಶಾಲೆ ಅನೇಕ ಬದಲಾವಣೆಗಳನ್ನು ಕಂಡಿತು.  ಅನಂತರ ಬಂದ ಸಿ. ಶ್ರೀಕಾತೇಶ್ವರ ಅಯ್ಯರ್ ತರಬೇತಿ ಶಾಲೆಗೆ ಕ್ರಿಮಿನಾಲಜಿ ಮ್ಯೂಸಿಯಂ ಒದಗಿಸಿರು.  ಐಜಿಪಿ ದೇವರಾಜ್ ಅರಸರಿಗ ಬಡ್ತಿ ಸಿಕ್ಕಾಗ ಅವರು ಕೌನ್ಸಿಲರ್ಶಿಪ್ (ಸಂಪುಟ) ಸೇರಿದರು. ಐಜಿಪಿಗಳಲ್ಲಿ ಮಂತ್ರಿ ಆದವರ ಪೈಕಿ ಇವರೇ ಮೊದಲಿಗರು ಎಂದು ಹೇಳ ಬಹುದು. **1930** ರಲ್ಲಿ ಎಫ್.ಎ. ಹ್ಯಾಮಿಲ್ಸನ್ ಅಧಿಕಾರಕ್ಕೆ ಬಂದರು.  ಸುಮಾರು ಎಂಟು ವರ್ಷ ಐಜಿಪಿ ಆಗಿದ್ದರು.  ಇವರ ಅಧಿಕಾರ ಅವಧಿಯಲ್ಲಿ ಪೊಲೀಸ್ ಇಲಾಖೆ ಬಹುತೇಕ ಬದಲಾವಣೆ ಕಂಡಿತು. ಕಾಲ ಉರುಳಿದಂತೆ ಎತ್ತಿನಬಂಡಿ, ಟಾಂಗಾಗಳ ಸಂಖ್ಯೆ ಹೆಚ್ಚಿತು.  ರಸ್ತೆಗೆ ಸೈಕಲ್ ಗಳು ಇಳಿದವು. ಕಾರುಗಳ ಓಡಾಟ ಪ್ರಾರಂಭ.  ರಸ್ತೆ ಸಂಚಾರ ನಿಯಂತ್ರಣದ ಸಮಸ್ಯೆ ಉದ್ಭವಿಸಿತು. ಹ್ಯಾಮಿಲ್ಟನ್ ಆಗ ಮೈಸೂರು,

ಬೆಂಗಳೂರು ನಗರಗಳಲ್ಲಿ ಸಂಚಾರ ವಿಭಾಗ ರಚಿಸಿದರು. ಅಲಸೂರು ಗೇಟ್, ಉಪ್ಪಾರ ಪೇಟೆ ಹಾಗು ಕಲಾಸಿಪಾಳ್ಯ ಪೊಲೀಸ್ ಠಾಣೆಗಳು ಸಂಚಾರ ನಿಯಂತ್ರಣದ ಜವಾಬ್ದಾರಿ ಹೊತ್ತವು. ಮೈಸೂರು ನಗರದಲ್ಲಿ ಯುರೋಪಿಯನ್ ಹೆಡ್ ಕಾನ್ಸ್ ಟೇಬಲ್ ಸಂಚಾರ ವಿಭಾಗದ ಮುಖ್ಯಸ್ಥರಾದರು. ಆದರೂ ಇವರ ಸಂಬಳ, ಭತ್ಯೆಗೆ ಅಮಲ್ದಾರರ ಸಹಿ ಬೇಕೇ ಬೇಕಾಗಿತ್ತು. ಕ್ರಮೇಣ ಎರಡು ನಗರಗಳಲ್ಲಿ ಪೊಲೀಸ್ ಪೇದೆಗಳಿಗೆ ಸೈಕಲ್ ಸೌಲಭ್ಯ ಒದಗಿತು. ಬೆಂಗಳೂರಿನ ಪೇದೆಗಳು ತಿಂಗಳಿಗೆ **7** ರೂ.**80** ಪೈಸೆ ಸೈಕಲ್ ಭತ್ಯೆ ನಿಗಧಿಪಡಿಸಲಾಯಿತು.

ಪ್ರೊಬೇಷನರ್

**1932** ರಲ್ಲಿ ಸುಶಿಕ್ಷಿತರನ್ನು ಪೊಲೀಶ್ ಇಲಾಖೆಗೆ ಸೇರಿಸು ಉದ್ದೇಶದಿಂದ, ನೇರವಾಗಿ ಪ್ರೊಬೇಷನರಿ ಪೊಲೀಸ್ ಇನ್ಸ್ ಪೆಕ್ಟರ್ ನೇಮಕ ಮಾಡಲಾಯಿತು. ರಾಜ್ಯದ ಐಜಿಪಿಯೇ ನೇಮಕ ಅಧಿಕಾರಿ. ವರ್ಷಕ್ಕೆ ಹತ್ತರಂತೆ ಪ್ರೊಬೇಷನರ್ ಪೊಲೀಸ್ ಇನ್ಸ್ ಪೆಕ್ಟರ್ ರ ನೇಮಕವಾದಂತೆ ಇಲಾಖೆಯಲ್ಲಿ ಸುಶಿಕ್ಷಿತರು ಕಾಲಿಡಲು ಪ್ರಾರಂಭಿಸಿದರು. ಸಾಹಸ, ಧೈರ್ಯ ತೋರಿಸಿದ ಹಾಗು ಅಪ್ರತಿಮ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಪ್ರೋತ್ಸಾಹಿಸಲು ಸರ್ಕಾರ ತೀರ್ಮಾನಿಸಿತು. ಗಂಡ ಬೇರುಂಡ ಪದಕ ನೀಡಿ ಗೌರವಿಸಲು ನಿರ್ಧಾರ(**1935**) ಈ ಪದಕ ಪಡೆದ ಪೇದೆ ಇಲ್ಲವೆ ಅಧಿಕಾರಿಗಳು ತಿಂಗಳಿಗೆ **3** ರಿಂದ **12** ರೂ. ಹೆಚ್ಚು ವೇತನ ಪಡೆದರು. ವಾಹನಗಳ ಸಂಖ್ಯೆ ಹೆಚ್ಚಿತು. ಅವುಗಳ ರಿಜಿಸ್ಟ್ರೇಷನ್, ಚಾಲಕರಿಗೆ ಲೈಸನ್ಸ್ ಕೊಡಲು ಆರಂಭಿಸಿದಾಗ ಬಸ್ ವಾರೆಂಟ್ ಪದ್ಧತಿ ಜಾರಿಗೆ ಬಂತು. ಇದಕ್ಕಾಗಿ ಐಜಿಪಿ ಕಛೇರಿ ಆವರಣದಲ್ಲಿ ವೇ ಬ್ರಿಜ್ ನಿರ್ಮಾಣ, ಬಸ್ ವಾರೆಂಟ್ ಉಸ್ತುವಾರಿಕೆಯನ್ನು ಪೊಲೀಸರಿಗೆ ವಹಿಸಲಾಯಿತು.

ಚಳುವಳಿ

**1939-** ಸ್ವಾತಂತ್ರ್ಯ ಚಳುವಳಿಯ ಗಾಳಿ ಹಳೇ ಮೈಸೂರಿಗೂ ಬೀಸಿತು. ಪೊಲೀಸರಿಗೆ ಸತ್ಯಾಗ್ರಹ ಧರಣಿ ಎಂಬುದರ ಬಿಸಿ ತಟ್ಟಿತು. ಹೆಚ್. ಸಿದ್ದಯ್ಯ, ಟಿ. ಸುಬ್ರಹ್ಮಣ್ಯಂ, ಮಳವಳ್ಳಿ ವೀರಪ್ಪ ಸೇರಿ ಎರಡು ಸಾವಿರ ಮಂದಿ ಬಂಧಿತರಾದರು. ಇವರ ಪೈಕಿ **1641** ಮಂದಿ ವಿರುದ್ಧ ಪೊಲೀಸರು ಮೊಕದಮೆ ಹೂಡಿದಾಗ ಇವರಿಗೆಲ್ಲ ಶಿಕ್ಷೆಯಾಯಿತು. ಇದು ಆಗಿನ ಕಾಲದ ಭಾರೀ ಸುದ್ದಿ. ಬೆಂಗಳೂರಿನ ಗಾತ್ರ ಹೆಚ್ಚಿತು. ಜನ ಸಂಖ್ಯೆಯೂ ಏರಿತು. ಅಪರಾಧಗಳು ಹೆಚ್ಚಾದವು. ಪೊಲೀಸರಿಗೆ ಹೆಚ್ಚು ಕೆಲಸದ ಭಾರ ಬಿತ್ತು. ಆಗ **1944**ರಲ್ಲಿ ಬೆಂಗಳೂರು ನಗರಕ್ಕೆ ಎಂ. ಕೆ. ಸೋಮಪ್ಪ, ಡಿಐಜಿ ಆಗಿ ನೇಮಕಗೊಂಡರು. ಈ ಮಧ್ಯೆ ಬೆಂಗಳೂರು ನಗರದಲ್ಲಿಬೀನ್ ಗೋಪಾಲ ರಾವ್ ಎಂಬುವವರು ಖಾಸಗೀ ಬ್ಯಾಂಕ್ ಸ್ಥಾಪಿಸಿದರು. ಬ್ಯಾಮಕ್ ವ್ಯವಹಾರ ಕುರಿತು ದೂರುಗಳು ಬಂದವು ಇದು ಸಾರ್ವಜನಿಕರ ಗಮನ ಸೆಳೆಯಿತು. ಸರ್ಕಾರದ ನ್ಯಾಯಮೂರ್ತಿ ಆದ ಪಿ ಮಾದಪ್ಪ ನಾಯಕತ್ವದಲ್ಲಿ ಎಸ್ ನಿಜಲಿಂಗಪ್ಪ. ಟೀಕೂರು ಸುಬ್ರಮಣ್ಯಂ, ಎನ್ ವೀರಪ್ಪ, ಎನ್ ಟಿ ಬಾಭು ರೆಡ್ಡಿ ಇವರುಗಳ ಆಯೋಗ ನೇಮಿಸಿತು. ಪೊಲೀಸ್ ಅಧಿಕಾರಿಯಾಗಿದ್ದ ಬಾಬು ರೆಡ್ಡಿ ಆಯೋಗದ ಕಾರ್ಯದರ್ಶಿಗಳು ಆಗಿದ್ದರು. ಆಯೋಗದ ಶಿಫಾರಸ್ಸನ್ನು ಮನ್ನಿಸಿದ ಬಾಬುರೆಡ್ಡಿ ಅವರಿಗೆ **150** ರೂ ಸಂಬಳ ಹೆಚ್ಚಿಸಿತು.

ಕೊಡಗು

ಕೊಡಗಿನಲ್ಲಿ ರಾಜರ ಆಡಳಿತ ಇತ್ತು. ಅಲ್ಲಿ ಸಂಘಟಿತವಾದ ಪೊಲೀಸ್ ಪದ್ಧತಿ ಇರಲಿಲ್ಲ. ಜಮ್ಮಾ ರೈತರೇ ಪೊಲೀಸರಾಗಿದ್ದರು. ಅಪರಾಧಿಗಳಿಗೆ ಬಾರೀಕೋಲಿನಿಂದ ಹೊಡೆದು ಇಲ್ಲವೇ ಸಾರ್ವಜನಿಕವಾಗಿ ಅವರನ್ನು ಕೆಲಸಕ್ಕೆ ಹಚ್ಚಿ ಶಿಕ್ಷಿಸಲಾಗುತ್ತಿತ್ತು. ಬಡ್ತಿ ಪಡೆದ ಪಟೇಲರು, ಗೌಡರು, ಸುಬೇದಾರ್ ಆಗಿ ಕೆಲಸವಹಿಸಿಕೊಂಡರು. ಸಾರ್ವಜನಿಕರ ದೂರುಗಳ ವಿಚಾರಣೆಗಾಗಿ ದರ್ನಾಫಲ್ ಕಛೇರಿ ಸ್ಥಾಪಿಸಲಾಗಿತ್ತು, **1861** ರಲ್ಲಿ, ಪೊಲೀಸ್ ಶಾಸನ ಜಾರಿಗೆ ಬಂದಾಗ ಕೊಡಗಿಗೆ ಮುಖ್ಯ ಕಮಿಷನರ್ ಆಗಿ ಒಬ್ಬನನ್ನು ನೇಮಿಸಲಾಯಿತು. ಇವರೇ ಐಜಿಪಿಯಾಗಿದ್ದರು.

ಬಳ್ಳಾರಿ ಮಂಗಳೂರು

ಹಳೇ ಮದ್ರಾಸ್ ರಾಜ್ಯಕ್ಕೆ ಸೇರಿದ ( ಇಂದಿನ ತಮಿಳು ನಾಡು ) ಬಳ್ಳಾರಿ , ಮಂಗಳೂರು ಜಿಲ್ಲೆ ಗಳಲ್ಲಿ ಕಾವಲು ಪಾಳೇಗಾರರೇ ಪೊಲೀಸರಾಗಿದ್ದರು. **1861** ರಲ್ಲಿ ಪೊಲೀಸ್ ಶಾಸನ ಜಾರಿಗೆ ಬಂದಾಗ ಈ ಜಿಲ್ಲೆಗಳಲ್ಲಿ ಕ್ರಮ ಭದ್ದ ಪೊಲೀಸ್ ಉಸ್ತುವಾರಿಕೆ ವಿಧಾನ ಪ್ರಾರಂಭವಾಯಿತು. ಜಿಲ್ಲೆ ಗಳಿಗೆ ಪೊಲೀಸ್ ಸೂಪರಿಂಟೆಂಡೆಂಟ್ , ಎಎಸ್ಪಿ ಗಳು ನೇಮಕಗೊಂಡರು. ಹಳೇ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದ ಬೆಳಗಾವಿ ದಾರವಾಡ ವಿಜಾಪುರ,ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬ್ರಿಟಿಷ್ ಆಡಳಿತದಿಂದಾಗಿ **1827** ರಲ್ಲಿಯೇ ಕ್ರಮಬದ್ದ ಪೊಲೀಸ್ ವ್ಯವಸ್ಥೆ ಇತ್ತು. ಈ ನಾಲ್ಕು ಜಿಲ್ಲೆಗಳಿಗೆ ಪುಣೆಯ ಡಿಐಜಿ ಮುಖ್ಯಾಧಿಕಾರಿ, ಎಸ್.ಎಸ್.ಎಲ್.ಸಿ ಇಲ್ಲವೆ ಇಂಟರ್ಮೀಡಿಯೇಟ್ ಆದವರನ್ನು ಪೊಲೀಸ್ ಇನ್ಸ್ ಪೆಕ್ಟರ್ ಆಗಿ ನೇಮಿಸಲಾಗುತ್ತಿತ್ತು. ಲಂಡನ್ನಿನಲ್ಲಿ ತರಬೇತಿ ಪಡೆದು ಇಂಡಿಯನ್ ಪೊಲೀಸ್ ದರ್ಜೆಗೆ ಸೇರಿದವರನ್ನು ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ನೇಮಿಸಲಾಗುತ್ತಿತ್ತು. ಹತ್ತು ವರ್ಷಗಳ ನಂತರ ಜಿಲ್ಲಾ ಎಸ್.ಪಿ.ಆಗಿ ಇವರಿಗೆ ಬಡ್ತಿ. ರಾಜ್ಯಗಳ ಪುನರ್ ರಚನೆ ನಂತರ ಬಂದ ಎಸ್.ಎನ್. ಹೊಸುಳಿ ಕರ್ನಾಟಕ ರಾಜ್ಯದ ಕೊನೇ ಐಜಿ ಅಧಿಕಾರ. ಇವರ ಅಧಿಕಾರದತರವೇ ಇತರ **IPS** ಅಧಿಕಾರಿಗಳು **IGP** ಹುದ್ದೆಗೆ ಬರಲು ಆರಂಭಿಸಿದರು.

ಹೈದ್ರಾಬಾದ್

ಹೈದ್ರಾಬಾದ್ ನಿಜಾಮರ ಸಂಸ್ಥಾನಕ್ಕೆ ಸೇರಿದ ಗುಲ್ಬರ್ಗ ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಸದರ-ಅಲ್-ಮೊಹಂ ಇಲ್ಲವೇ ಪೊಲೀಸ ಮಿನಿಸ್ಟರ್ ಎಂಬ ಪದ ಬಳಕೆಯಲ್ಲಿತ್ತು. ತಾಲ್ಲೂಕುಗಳಲ್ಲಿ ಅಮೀನದಾರರು, ಇನ್ಸ್ ಪೆಕ್ಟರರು, ಪೊಲೀಸ್ ಮುಖ್ಯಸ್ಥರು. ಇದರ ಜೊತೆಗೆ ನಿಜಾಮರ ದಿವಾನಿ ಪೊಲೀಸ್ ಹಾಗೂ ಜಹಗೀರ ಪೊಲೀಸ್ ಪದ್ಧತಿಯು ಇತ್ತು. ಇಲ್ಲಿ ಇದ್ದ ಜಹಗೀರದಾರರೇ ಜಹಗಾರ ಪೊಲೀಸರಾಗಿ ನೇಮಿಸಿದರು. ಜಹಗಾರರ ಆಸ್ತಿ ಸ್ವತ್ತು ರಕ್ಷಿಸುವುದೇ ಇವರ ಕೆಲಸ. **1948**ರಲ್ಲಿ ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾದಾಗ ಈ ಪದ್ಧತಿ ಕೊನೆಗೊಂಡಿತು.

**1956** ರ ನಂತರ

**1956** ರಲ್ಲಿ ಹರಿದುಹಂಚಿದ್ದ ಕನ್ನೆನೆಲಗಳು ಒಂದಾದವು. ರಾಜ್ಯ ಒಂದಾದಾಗ ಪೊಲೀಸರ ವೇಷ ಭೂಷಣಗಳು ಒಂದಾದವು. ಎಲ್ಲರೂ ಸೇರಿ ಮೈಸೂರು ಪೊಲೀಸರಾದರು. ಕಾಲ ಚಕ್ರ ಉರುಳಿದಂತೆ ಶಾಂತಿ, ಕಾನೂನು ಅಪರಾಧದ ಸಮಸ್ಯೆಗಳು ಹೆಚ್ಚಿದವು. ಅದಕ್ಕೆ ತಕ್ಕಂತೆ ಶಕ್ತಿ ಸಾಮರ್ಥ್ಯ, ಸೌಲಭ್ಯ ಹೆಚ್ಚಿಕೊಂಡ ಇಲಾಖೆ ಬೃಹತ್ ರೂಪದಲ್ಲಿ ಬೆಳೆದು ನಿಂತಿತು. ಅದಿನ್ನೂ ಬೆಳೆಯುತ್ತಲೇ ಇದೆ. ಆರಂಭದಲ್ಲಿ ಇಲಾಖೆ ಸಣ್ಣದು, ಬೆಳಗಾವಿ, ಬೆಂಗಳೂರು, ಮೈಸೂರು ಹೀಗೆ ಮೂರು ಡಿಐಜಿ ರೇಂಜುಗಳನ್ನು ಹೊಂದಿತ್ತು. ಇದರ ಜೊತೆ ಸಣ್ಣ ಮೀಸಲು ಪಡೆ , ಇಂಟಲಿಜೆನ್ಸಿ, ಹಾಗೂ ಸಿಐಡಿ ಶಾಖೆ ಹೊಂದಿತ್ತು. ಇಲಾಖೆಗೆ ಪಿಕೆ ಮೋನಪ್ಪ ರಾಜ್ಯದ ಪ್ರಥಮ ಅಷ್ಟೇ ಅಲ್ಲ ರಾಜ್ಯದಲ್ಲಿ ಪ್ರಥಮ ಐ.ಪಿ (ಇಂಡಿಯನ್ ಪೊಲೀಸ್ ಅಧಿಕಾರಿಕೂಡ). ಶ್ರೀ ಮೋನಪ್ಪ ರವರು ನಿವೃತ್ತಿಯಾದ ನಂತರ ಅವರ ಸ್ಥಾನಕ್ಕೆ ಶ್ರೀ ಎಸ್ ಎನ್ ಹೊಸಾಳಿ ಬಂದರು. ರಾಜ್ಯ ದಲ್ಲಿ ಕೊನೆ ಐಪಿ ಅಧಿಕಾರಿ ಆಗಿದ್ದ ಹೊಸಾಳಿ ಅತೀ ಹೆಚ್ಚು ಕಾಳ ಅಂದರೆ **12-1/2** ವರ್ಷ ಐಜಿಪಿ ಆಗಿದ್ದರು. ರಾಜ್ಯ ಒಂದಾಗಿದ್ದರಯ ಗಡಿ ಅಂಚಿನ ಪ್ರದೇಶಗಳು ತುಂಬಾ ದೂರ ಆಗಿದ್ದವು. ತುರ್ತು ಪರಿಸ್ಥಿತಿಗಳಲ್ಲಿ ಈ ಪ್ರದೇಶಗಳಲ್ಲಿ ನಿಯಂತ್ರಣ ಕಷ್ಟವಾಯಿತು.ಕಲಬುರ್ಗಿ ಕೇಂದ್ರವನ್ನಾಗಿ ಮಾಡಿ. ಇನ್ನೊಂದು ಡಿಜಿಪಿ ರೇಂಜ್ ರಚನೆ ಮಾಡಿತು, ಈ ಮದ್ಯೆ ಪಕ್ಕದ ಗೋವೆ ಪೂರ್ಚುಗೀಸರಿಂದ ವಿಮುಕ್ತಿ ಪಡೆಯಿತು. ಕೇಂದ್ರ ಸರ್ಕಾರ ಅಲ್ಲಿನ ಆಡಳಿತವನ್ನು ನಮ್ಮ ಪೊಲೀಸರಿಗೆ ವಹಿಸಿತು. ಅಲ್ಲಿ ಸಲ್ಲಿಸಿದ ಸೇವಗಾಗಿ ಕೇಂದ್ರ ಸರ್ಕಾರ ಕರ್ನಾಟಕದ ಪೊಲೀಸರಿಗೆ ಸರ್ಟಿಫಿಕೇಟ್ ಕೊಟ್ಟಿತ್ತು.

## ಬೆಂಗಳೂರು ನಗರ

ಹರಿದು ಹಂಚಿ ಹೋದ ನೆಲಗಳು ಒಂದು ಗೂಡಿ ಆರು ವರ್ಷಗಳು ಕಳೆದವು. ಬೆಂಗಳೂರಿನ ಗಾತ್ರ ವಿಸ್ತಾರಗೊಂಡಿತು. ಇದರೊಂದಿಗೆ ಪೊಲೀಸ್ ಜವಾಬ್ದಾರಿಯೂ ಹೆಚ್ಚಿತು. **1963** ಜುಲೈ **04** ರಂದು ಬೆಂಗಳೂರು ನಗರದಲ್ಲಿ ಪೊಲೀಸ್ ಕಮಿಷನರ್ ಆಡಳಿತದ ವ್ಯವಸ್ಥೆ ಜಾರಿಗೆ ಬಂತು. ಹಿರಿಯ ಡಿಐಜಿ ಸಿ. ಚಾಂಡಿ ಬೆಂಗಳೂರು ಪ್ರಥಮ ಕಮೀಷನರ್. ಹಂಚಿಬಂದ ಕನ್ನಡ ಪ್ರದೇಶ ಪೊಲೀಸ್ ಶಾಸನ, ಪದ್ಧತಿ, ವಿಧಾನಗಳು ಭಿನ್ನವಾಗಿದ್ದವು. ಇವುಗಳ ಏಕರೂಪಕ್ಕೆ ಸರ್ಕಾರ ಕೈ ಹಾಕಿತು ಪರಿಣಾಮ **1964** ರಲ್ಲಿ ಏಕರೂಪ ಶಾಸನ ಜಾರಿಗೆ ಬಂತು. ಸಮಸ್ಯೆ ಇಲ್ಲಿಗೆ ಮುಗಿಯಲಿಲ್ಲ ತೋಟಿ, ತಳವಾರ, ಪಟೇಲರು ಇನ್ನೂ ಪೊಲೀಸ್ ವ್ಯವಸ್ಥೆಯಲ್ಲಿ ಇದ್ದರು. ಇದಕ್ಕೊಂದು ರೂಪ ಕೊಡಲು **1969** ರಲ್ಲಿ ಗ್ರಾಮರಕ್ಷಕ ದಳ ಶಾಸನ ರಚನೆ, ಇಲಾಖೆಯಲ್ಲಿ ಶಿಸ್ತು ಇರಬೇಕು ಎಂದರೇ ಇಲಾಖೆಗೆ ಒಬ್ಬ ಯಜಮಾನ ಇರಬೇಕು ಎಂಬುದು ಅಭಿಪ್ರಾಯವಾಗಿತ್ತು. **1972** ರಲ್ಲಿ ಶ್ರೀ ದೇವರಾಜ ಅರಸು ಮುಖ್ಯಮಂತ್ರಿಯಾಗಿ ತನ್ನ ಅಧಿಕಾರದ ಕೊನೆಯಬ ಗಳಿಗೆಯವರೆಗೆ ಶ್ರೀ ದೇವರಾಜ ಅರಸು ಗೃಹಖಾತೆಯನ್ನು ಇನ್ನೊಬ್ಬರಿಗೆ ಬಿಟ್ಟುಕೊಡಲಿಲ್ಲ. ಅದರೆಅವರ ಅಧಿಕಾರವಧಿಯಲ್ಲಿ ಬೃಹತ್ ರೂಪದಲ್ಲಿ ಬೆಳೆದ ಇಲಾಖೆ ಹೊಸ ರೂಪ ಬಂತು. ಇಂಟಲಿಜೆನ್ಸ್ ಹಾಗು ಸಿಐಡಿ ಶಾಖೆಗಳನ್ನು ಬೇರ್ಪಡಿಸಿ, ಡಿಐಜಿ ನಾಯಕತ್ವದದಲ್ಲಿ ಪ್ರತ್ಯೇಕ ಶಾಖೆಗಳನ್ನು ರಚಿಸಲಾಯಿತು. ನಂತರ ಸಿಐಡಿ ಆಗಿದ್ದ ಶಾಖೆ ಸಿಓಡಿಯಾಗಿ ಐಜಿ ಕಛೇರಿಯಿಂದ ಕಾರ್ಲ್ಟನ್ ಹೌಸ್‌ಗೆ ಸ್ಥಳಾಂತರಿಸಲಾಯಿತು. ಬರೀ ಅಪರಾಧ ತನಿಖೆಯನ್ನು ನಡೆಸುವುದು ಇದರ ಕೆಲಸವಾಗಿತ್ತು. ಇದಕ್ಕೆ ಅರಣ್ಯ, ಆಹಾರ, ಅಪರಾಧ ವಿಜ್ಞಾನ ಪ್ರಯೋಗ ಶಾಲೆಯ ಕೆಲಸ ಒಪ್ಪಿಸಲಾಯಿತು. ಕೆಸಲದ ಬಾರ ಹೆಚ್ಚಾದಗ ಅರಣ್ಯ, ಆಹಾರ ಶಾಖೆಗಳಿಗೆ ಮತ್ತು ಡಿಐಜಿ ನೇಮಕ ಮಾಡಲಾಯಿತು. ಈ ಮದ್ಯೆ ಹರಿಜನ-ಗಿರಿಜನರ ಮೇಲೆ ಅತ್ಯಾಚಾರ,ಹಲ್ಲೆಗಳ ಸಂಖ್ಯೆ ಹೆಚ್ಚಾದವು. ಆಗ ನಾಗರೀಕ ಹಕ್ಕು ಭಾದ್ಯತೆ ಶಾಸನ ಕಟ್ಟುನಿಟ್ಟಾಗಿ ಜಾರಿಗೆ ತರಲು ಸಿಓಡಿ ಅಡಿಯಲ್ಲಿ ಇನ್ನೊಂದು ಶಾಖೆ ರಚನೆ, ವಸ್ತು ಪಾಲಿಕೆಗೆ ಡಿಐಜಿ ನೇಮಕ ಇದರ ಜತೆ ಡಿಐಜಿ ವಲಯಗಳಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್‌ರ ನೇಮಕ ಮಾಡಲಾಯಿತು.

## ಗೃಹ ರಕ್ಷಕದಳ ಹಾಗು ಅಗ್ನಿ ಶಾಮಕ ಪಡೆ:-

ಪೊಲೀಸ್ ಇಲಾಖೆಯ ಇನ್ನೊಂದು ಆಂಗ ಗೃಹರಕ್ಷಕದಳ ಮತ್ತು ಅಗ್ನಿಶಾಮಕ ದಳ ತುರ್ತುಪರಿಸ್ಥಿತಿಯಲ್ಲಿ ಇದರ ಕೆಲಸ ಅತಿ ಮುಖ್ಯ, ಸಾರ್ವಜನಿಕರು ಬಯಸಿದ್ದಲ್ಲಿ ಇದರ ಸೇವೆ ಸದಾ ಸಿದ್ಧ. ಈಗ ಇದು ಪೊಲೀಸ್ ಇಲಾಖೆಯಿಂದ ಬೇರ್ಪಡಿಸಿ, ಇದಕ್ಕೋಬ್ಬ ಪ್ರತ್ಯೇಕ ಪೊಲೀಸ್ ಡೈರೆಕ್ಟರ್ ಜನರಲ್(ಡಿಜಿಪಿ)ರವರನ್ನು ನೇಮಿಸಿ ಶ್ರೀ ವಿ.ಆರ್, ನಿಜಾಮುದ್ದಿನ್‌ರವರನ್ನು ಡಿಜಿಪಿಯಾನ್ನಾಗಿ ನೇಮಿಸಲಾಯಿತು.

## ಪೊಲೀಸ್ ಕಂಪ್ಯೂಟರ್ ವಿಂಗ್:-

ಪೊಲೀಸ್ ಇಲಾಖೆಯಲ್ಲಿ ದಾಖಲೆ ಪತ್ರಗಳು ಅತೀ ಮುಖ್ಯ ಇವು ಇಲ್ಲದಿದ್ದರೆ ಪೊಲೀಸ್ ಠಾಣೆ ಇದ್ದರೂ ಸತ್ತಂತೆ, ದಾಖಲೆ ಪತ್ರಗಳ ನಿರ್ವಹಣೆ ಭಾರೀ ಸಮಸ್ಯೆ ತಂದೊಡ್ಡಿದಾಗ ಇಲಾಖೆ ಕಂಪ್ಯೂಟರ್ ಪದ್ಧತಿಗೆ ಮೊರೆ ಹೊಯಿತು. ಅಪರಾಧಿಗಳ ಬಾವಚಿತ್ರ, ಬೆರಳಿನ ಗುರುತು. ಅವರ ಇತಿಹಾಸದ ವಿವರಗಳನ್ನು ಸಂಗ್ರಹಿಸುವುದೇ ಇದರ ಕೆಲಸ ಇಲಾಖೆಯ ಸಿಬ್ಬಂದಿಗಳ ವೈಯಕ್ತಿ ವಿವರಗಳು, ವೇತನ ಬಿಲ್ ಇತ್ಯಾದಿಗಳನ್ನು ನಿರ್ವಹಿಸುತ್ತದೆ. ಎಸ್ಪಿ ದರ್ಜೆಯ ಅಧಿಕಾರಿ ಮುಖ್ಯಸ್ಥರು. ಪ್ರಸ್ತುತ ಪೊಲೀಸ್ ಇಲಾಖೆಯ ಗಣಕೀಕರಣ ಉಸ್ತುವಾರಿಯನ್ನು ಪೊಲೀಸ್ ಕಂಪ್ಯೂಟರ್ ವಿಂಗ್ ನಿರ್ವಹಿಸುತ್ತದೆ. ಮತ್ತು ಎಲ್ಲಾ ಮಾಹಿತಿ ತಂತ್ರಾಂಶ ಯೋಜನೆಗೆ ಪೊಲೀಸ್ ಕಂಪ್ಯೂಟರ್ ವಿಂಗ್ ಒಂದು ಸಮನ್ವಯ ಕೇಂದ್ರವಾಗಿದೆ. **1977** ರಲ್ಲಿ ಅಪರಾಧಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಅಪರಾಧಿಗಳ ಬಗ್ಗೆ ಗುಪ್ತ ಮಾಹಿತಿಯನ್ನು ಎಲ್ಲಾರಿಗೂ ತಲುಪುವಂತೆ ಮಾಡಲು (ರಾಜ್ಯದ್ಯಾಂತ ಮತ್ತು ರಾಷ್ಟ್ರದ್ಯಾಂತ) ಮತ್ತು ಮಾಹಿತಿಗಳನ್ನು ಸರಿಯಾದ ರೀತಿಯಲ್ಲಿ ಕ್ರೂಢೀಕರಣ ಮಾಡುವ ಉದ್ದೇಶದಿಂದ, ರಾಜ್ಯ ಅಪರಾಧ

ದಾಖಲಾತಿ ಮರು ವಿಂಗಡಣೆಯಾಗಿ, ಐಜಿ, ಪೊಲೀಸ್ ಕಂಪ್ಯೂಟರ್ ವಿಂಗ್ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.

**ಸಾರಿಗೆ ವ್ಯವಸ್ಥೆ:**

**1928** ರಲ್ಲಿ ಸೈಕಲ್‌ಗಳನ್ನು ಹೊಂದಿದ್ದ ಇಲಾಖೆ ಇಂದು ತನ್ನದೇ ಆದ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. **1929-30** ರಲ್ಲಿ ಬರೀ ಮೂರು ಬಸ್ಸುಗಳನ್ನು ಹೊಂದಿದ್ದ ಇಲಾಖೆ ಇಂದು ಬಸ್ಸು, ಕಾರು, ಟೆಂಪೋ, ಜೀಪು ಮೋಟಾರ್ ಸೈಕಲ್ ಇತ್ಯಾದಿ ವಾಹನಗಳನ್ನು ಪಡೆದಿದೆ. ವಾಹನಗಳ ದುರಸ್ತಿ, ಚಾಲಕರಿಗೆ ತರಬೇತಿ ಈ ಶಾಖೆ ಹೊಂದಿದೆ.

ಮೀಸಲು ಪಡೆ :- ರಾಜ್ಯ ಅಸ್ತಿತ್ವಕ್ಕೆ ಬಂದಾಗ ಸತ್ಯಾಗ್ರಹ ಚಳುವಳಿ, ಮುಷ್ಕರಗಳು ಅಷ್ಟಿರಲಿಲ್ಲ. ಇಂದು ಇವುಗಳ ಸಂಖ್ಯೆ ಹೆಚ್ಚಾಗಿದೆ. ಈ ಘಟನೆಗಳು ಸಂಭವಿಸಿದಾಗ ಪರಿಸ್ಥಿತಿ ನಿಯಂತ್ರಿಸಲು ಕರ್ನಾಟಕ ರಾಜ್ಯ ಮೀಸಲು ಪಡೆ ರಚಿಸಲಾಗಿದೆ. **1956** ರಲ್ಲಿ ರಾಜ್ಯ ಮೂರು ಬೆಟಾಲಿಯನ್ (ಸರಾಸರಿ ಮೂರು ಸಾವಿರಕ್ಕಿಂತ ಹೆಚ್ಚು) ಪಡೆಗಳಿದ್ದು, ಪ್ರಸ್ತುತ **11** ಪಡೆಗಳು ಮತ್ತು **2** ಐಆರ್‌ಬಿ ಇದೆ. ಇವುಗಳಲ್ಲಿ **4** ಪಡೆಗಳ ಕೇಂದ್ರ ಸ್ಥಾನಗಳ ಬೆಂಗಳೂರಾಗಿದ್ದು, ಉಳಿದಂತೆ ಮೈಸೂರು, ಬೆಳಗಾವಿ, ಕಲ್ಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ಶಿಗ್ಗಾವ್‌ನಲ್ಲಿ ತಲಾ ಒಂದೊಂದು ಪಡೆಗಳು ಕಾರ್ಯ ನಿರ್ವಹಿಸುತ್ತಿದೆ. ಇದಲ್ಲದೇ ಪ್ರತಿ ಜಿಲ್ಲೆ ಮತ್ತು ನಗರದಲ್ಲಿ ಜಿಲ್ಲಾ ಮತ್ತು ನಗರ ಸಶಸ್ತ್ರ ಮೀಸಲು ಪಡೆ ಕಾರ್ಯನಿರ್ವಹಿಸುತ್ತಿರುವುದು.

## ಪೊಲೀಸ್ ತರಬೇತಿ ಘಟಕ

### 1. ಕರ್ನಾಟಕ ಪೊಲೀಸ್ ಅಕಾಡೆಮಿ ಮೈಸೂರು

ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವ ವಿಧಾನಗಳು

**1.** ಐಪಿಎಸ್ ಪ್ರೊಬೇಷನರ್ಸ್‌ಳಿಗೆ ಸಾಂಸ್ಥಿಕೋತ್ತರ ತರಬೇತಿ
**2.** ಗೆಜೆಟೆಡ್ ಪ್ರೊಬೇಷನರ್‌ಗಳಿಗೆ ಮೂಲ ತರಬೇತಿ
**3.** ಪ್ರೊಬೇಷನರಿ ಪಿಎಸ್‌ಐಗಳಿಗೆ ಮೂಲ ತರಬೇತಿ (ಪಠ್ಯ ಕ್ರಮ ಲಗತ್ತಿಸಿದೆ) (ಉದ್ದೇಶಿತ)
**4.** ಪುನರ್ ಮನನ ತರಬೇತಿ
**5.** ಪುನ:ಶ್ಚೇತನ ಪಠ್ಯಕ್ರಮ
**6.** ವಿಷಯಾಧಾರಿತ ಪಠ್ಯಕ್ರಮ
**7.** ಹೊರರಾಜ್ಯಗಳ ಮತ್ತು ವಿದೇಶಿ ಪೊಲೀಸ್ ಅಧಿಕಾರಿಗಳಿಗೆ ಮೂಲ ತರಬೇತಿ (ಮಾಲ್ಡೀವ್ಸ್, ರಾಯಲ್ ಭೂತಾನ್, ಪುದುಚೇರಿ)
**8.** ಇತರೆ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ (ಸಾರಿಗೆ, ರಾಜ್ಯ ಅಬಕಾರಿ ಮತ್ತು ಕೇಂದ್ರ ಅಬಕಾರಿ)

### 2. ಪೊಲೀಸ್ ತರಬೇತಿ ಕಾಲೇಜು, ಗುಲ್ಬರ್ಗ:

ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವ ವಿಧಾನಗಳು

**1** ಪೊಲೀಸ್ ಕಾನ್ಸ್ಟೇಬಲ್‌ಗಳಿಗೆ ಮೂಲ ತರಬೇತಿ (**9** ತಿಂಗಳು) ಮತ್ತು ಪಿಎಸ್‌ಐ ಗಳಿಗೆ (**12** ತಿಂಗಳು) ಮತ್ತು ಸೇವೆಯಲ್ಲಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ಪುನ:ಶ್ಚೇತನ ತರಬೇತಿ
**2** ಸೇವೆಯಲ್ಲಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ಪುನರ್ ಮನನ ತರಬೇತಿ
**3** ಒತ್ತಡ ವ್ಯವಸ್ಥಾಪನಾ ತರಬೇತಿ.
**4** ಲಿಂಗ ತಾರತಮ್ಯ ಪರಿಜ್ಞಾನ ಮತ್ತು ಜನಸ್ನೇಹಿ ಪೊಲೀಸ್ ಕಾರ್ಯಗಾರ

### 3. ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಶಾಲೆ, ಚೆನ್ನಪಟ್ಟಣ:

ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವ ವಿಧಾನಗಳು

**1.** ಹೊಸದಾಗಿ ನೇಮಕಗೊಂಡ ಪೊಲೀಸ್ ಕಾನ್ಸ್ಟೇಬಲ್ಗಳಿಗೆ **9** ತಿಂಗಳ ಮೂಲ ತರಬೇತಿ ಪಠ್ಯಕ್ರಮ
**2.** ಸೇವೆಯಲ್ಲಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ಪುನರ್ ಮನನ ಪಠ್ಯಕ್ರಮ

3. ಒತ್ತಡ ವ್ಯವಸ್ಥಾಪನಾ ತರಬೇತಿ
4. ಲಿಂಗ ತಾರತಮ್ಯ ಪರಿಜ್ಞಾನ ಮತ್ತು ಜನಸ್ನೇಹಿ ಪೊಲೀಸ್ ಕಾರ್ಯಾಗಾರ

## 4. ಪೊಲೀಸ್ ತರಬೇತಿ ಶಾಲೆ, ಖಾನಾಪುರ:

ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವ ವಿಧಾನಗಳು

1. ಹೊಸದಾಗಿ ನೇಮಕಗೊಂಡ ಪೊಲೀಸ್ ಕಾಸ್ಟೇಬಲ್‌ಗಳಿಗೆ 9 ತಿಂಗಳ ಮೂಲ ತರಬೇತಿ ಪಠ್ಯಕ್ರಮ
2. ಸೇವೆಯಲ್ಲಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ಪುನರ್ ಮನನ ಪಠ್ಯಕ್ರಮ ಒತ್ತಡ ವ್ಯವಸ್ಥಾಪನಾ ತರಬೇತಿ

ಲಿಂಗ ತಾರತಮ್ಯ ಪರಿಜ್ಞಾನ ಮತ್ತು ಜನಸ್ನೇಹಿ ಪೊಲೀಸ್ ಕಾರ್ಯಾಗಾರ

## 5. ಸಶಸ್ತ್ರ ಪೊಲೀಸ್ ತರಬೇತಿ ಶಾಲೆ, ಯಲಹಂಕ, ಬೆಂಗಳೂರು:

ಹೊಸದಾಗಿ ನೇಮಕಗೊಂಡ ಸಶಸ್ತ್ರ ಪೊಲೀಸ್ ಕಾನ್ಸ್ಟೇಬಲ್ಗಳಿಗೆ 9 ತಿಂಗಳ ಮೂಲ ತರಬೇತಿ ಪಠ್ಯಕ್ರಮ

## 6. ಪೊಲೀಸ್ ವಾಹನ ಚಾಲನೆ ಮತ್ತು ನಿರ್ವಹಣಾ ಶಾಲೆ:

ಪೊಲೀಸ್ ಸಿಬ್ಬಂದಿಗೆ ವಾಹನ ಚಾಲನಾ ತರಬೇತಿ ಕೊಡಲಾಗುತ್ತದೆ.

## 7. ಇತರೆ ತಾತ್ಕಾಲಿಕ ಪೊಲೀಸ್ ತರಬೇತಿ ಕೇಂದ್ರಗಳು:

ಪೊಲೀಸ್ ಕಾನ್ಸ್ಟೇಬಲ್ಗಳಿಗೆ ತರಬೇತಿ ನೀಡಲು ರಾಜ್ಯ ಶಾಶ್ವತ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತಾತ್ಕಾಲಿಕ ಪೊಲೀಸ್ ತರಬೇತಿ ಕೇಂದ್ರಗಳಿವೆ.

## ಪೊಲೀಸ್ ತರಬೇತಿ ಪಠ್ಯಕ್ರಮ :

1. ವರ್ಟಿಕಲ್ ಇನ್ಸ್ಟ್ರಕ್ಷನ್ ಕೋರ್ಸ
2. ಸ್ಟೇಷನ್ ಹೌಸ್ ಮ್ಯಾನೇಜ್ಮೆಂಟ್
3. ಒರಿಯೆನ್ಟೇಶನ್ ಕೋರ್ಸ
4. ಸುಪರ್ವೈಸರೀ ಸ್ಕಿಲ್ಸ್
5. ವಿಐಪಿ ಸೆಕ್ಯೂರಿಟಿ
6. ಇನ್ಸೈಸ್ ಟ್ರೈನಿಂಗ್
7. ಕ್ರೌಡ್ ಕಂಟ್ರೋಲ್
8. ಟ್ರೈನಿಂಗ್ ಆಫ್ ಟ್ರೈನರ್ಸ್
9. ಡ್ರಗ್ ಲಾ ಎನ್ಫೋರ್ಸಮೆಂಟ್
10. ಪ್ರಮೋಷನಲ್ ಕೋರ್ಸ
11. ಹಾಡ್ಲಿಂಗ್ ಆಫ್ ಎಕ್ಸಪ್ಲೊಸೀವ್ಸ್
12. ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ ಪ್ರೋಗ್ರಾಂ
13. ಪೊಲೀಸ್ ಕಮ್ಯುನಿಟಿ ರಿಲೇಷನ್
14. ಕ್ಯಾಪ್ಸೂಲ್ ಕೋರ್ಸ ಆನ್ ಟೈಮ್/ಸ್ಟ್ರೆಸ್ಸ್ ಮ್ಯಾನೇಜ್ಮೆಂಟ್, ವೈಟ್ ಕಾಲರ್ ಕ್ರೈಂ
15. ಎಸ್.ಸಿ. & ಎಸ್.ಟಿ (ಪ್ರಿವೆನ್ಷನ್ ಆಫ್ ಅಟ್ರಾಸಿಟಿ) ಆ್ಯಕ್ಟ್ 1989 ಮತ್ತು ರೂಲ್ಸ್ 1995
16. ಕ್ರಿಯೇಟಿಂಗ್ ಅವೇರ್ನೆಸ್ಸ್ ಆನ್ ಪ್ರಿವೆನ್ಷನ್ ಆಫ್ ಹೆಚ್.ಐ.ವಿ/ಎಡ್ಸ್
17. ಪೊಲೀಸ್ ಮತ್ತು ಮಾನವ ಹಕ್ಕು
18. ಟ್ರಾಫಿಕಿಂಗ್ ಇನ್ ಪರ್ಸನ್ಸ್ ಮತ್ತು ರೋಲ್ ಆಫ್ ಪೊಲೀಸ್
19. ಸ್ಕಿಲ್ಸ್ ಇನ್ ಇನ್ವೆಸ್ಟಿಗೇಷನ್
20. ಸೈನ್ಟಿಫಿಕ್ ಎಡ್ ಟು ಇನ್ವೆಸ್ಟಿಗೇಷನ್
21. ಸ್ಟೇಷನ್ ಹೌಸ್ ಮ್ಯಾನೇಜ್ಮೆಂಟ್ ಮತ್ತು ಸ್ಕಿಲ್ಸ್ ಇನ್ ಇನ್ವೆಸ್ಟಿಗೇಷನ್
22. ಲಿಂಗ ತಾರತಮ್ಯ ಪರಿಜ್ಞಾನ ಮತ್ತು ಜನಸ್ನೇಹಿ ಪೊಲೀಸ್ ಕೋರ್ಸ
23. ಲೈಫ್ ಸ್ಟೈಲ್ & ಸ್ಟ್ರೆಸ್ಸ್ ಮ್ಯಾನೇಜ್ಮೆಂಟ್
24. ವರ್ಕ ಶಾಫ್ ಆನ್ ಸ್ಪೇಷಲ್ ಜುವೆನೈಲ್ ಪೊಲೀಸ್ ಯುನಿಟ್
25. ಸೈಬರ್ ಕ್ರೈಂ
26. ಪೊಲೀಸಿಂಗ್: ರೀಚಿಂಗ್ ಔಟ್ ಟು ದಿ ಮೈನಾರಿಟೀಸ್ಸ್
27. ಫೈಟ್ ಎಗನೆಸ್ಟ್ ಟೆರರ್
28. ಕಮ್ಯುನಿಕೇಷನ್ಸ್ ಫಾರ್ ಪೊಲೀಸ್ ಲೀಡರ್ಶಿಪ್
29. ಸಾಫ್ಟ್ ಸ್ಕಿಲ್ಸ್

30. ಇಂಟಾರಾಗೇಷನ್ ಟೆಕ್ನಿಕ್ಸ್, ಮಿಲಿಟೆಂಸ್ಸಿ, ಟೆರರಿಸಮ್ ಮತ್ತು ನ್ಯಾಷನಲ್ ಸೆಕ್ಯೂರಿಟಿ ಇಸ್ಯೂಸ್
31. ಡಿಸಾಸ್ಟ್ರ ಮ್ಯಾನೇಜ್ಮೆಂಟ್
32. ಕೋರ್ಸ್ ಆನ್ ಲೇಟೆಸ್ಟ್ ರೂಲಿಂಗ್ಸ್ ವಿತ್ ರಿಗಾಡರ್ಿ ಟು ಕ್ರಿಮಿನಲ್ ಲಾ
33. ಕ್ಯಪಾಸಿಟಿ ಬಿಲ್ಡಿಂಗ್ ಆಫ್ ಪೊಲೀಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ಸ್
34. ಟ್ರೈನಿಂಗ್ ಆನ್ ಸೋಷಿಯಲ್ ಡಿಫೆನ್ಸ್
35. ಕೋರ್ಸ್ ಆನ್ ಕೆಸಿಎಸ್ (ಸಿಸಿಎ) ರೂಲ್ಸ್, ಕೆಎಸ್ಪಿ (ಡಿಪಿ) ರೂಲ್ಸ್, ಆರ್ಟಿಐ ಆಕ್ಟ್, ಡಿಸಾಸ್ಟರ್ ಮ್ಯಾನೇಜ್ಮೆಂಟ್
36. ಮೀಡಿಯಾ ರಿಲೇಷನ್ಸ್ ಇನ್ ಕ್ರೈಸೀಸ್ ಸಿಚುವೇಷನ
37. ಪೊಲೀಸ್ ಐಟಿ ಮತ್ತು ಗಣಕಯಂತ್ರ ತರಬೇತಿ.

## ನಾಗರಿಕ ಕೇಂದ್ರಿತ ಸೇವೆಗಳು

- ☐ ಪರವಾನಗಿಯ ಭದ್ರತಾ ಸಂಸ್ಥೆಗಳು
- ☐ ನಮೂನೆಗಳು
- ☐ ಸಕಾಲ ಸೇವೆಗಳು
- ☐ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ
- ☐ ಪಾಸ್ಪೋರ್ಟ್ ಸೇವೆಗಳು

# ಸಕಾಲ ಸೇವೆಗಳು

| ಕ್ರಮ ಸಂಖ್ಯೆ | ಸೇವೆಗಳು |
|---|---|
| 1 | ಎಫ್ಐಆರ್ ನಕಲು ಪ್ರತಿ ದೂರುದಾರರಿಗೆ ನೀಡುವುದು |
| 2 | ಧ್ವನಿ ವರ್ಧಕ ವ್ಯವಸ್ಥೆಯ ಪರವಾನಗಿ |
| 3 | ಅಮ್ಯೂಸ್ಮೆಂಟ್ ಪರವಾನಗಿ |
| 4 | ಶಾಂತಿಯುತ ಮತ್ತು ಸಭೆ ಹಾಗೂ ಮೆರವಣಿಗೆಗಾಗಿ ಅನುಮತಿ |
| 5 | ನಿವಾಸ ಪರವಾನಗಿ ವಿಸ್ತರಣೆ ಕೋರಿ ಎನ್.ಸಿ.ಒ. |
| 6 | ಅರ್ಜಿಗಳ ರಸೀದಿ ಮತ್ತು ವಿಲೇವಾರಿ |
| 7 | ಭಾರತಕ್ಕೆ ಮರಳಲು ಯಾವುದೇ ನಿರ್ಬಂಧ ಇರದ (ನೋರಿ) ಪ್ರಮಾಣಪತ್ರ |
| 8 | ಪಾಸ್ಪೋರ್ಟ್ ಪರಿಶೀಲನೆ(ಎನ್ಒಸಿ) |
| 9 | ಸೇವೆ ಪರಿಶೀಲನೆ |
| 10 | ಎನ್ಪಂಪ್ ಪೆಟ್ರೋಲ್ - ಸಿ.ಒ.ಗ್ಯಾಸ್ ಏಜೆನ್ಸಿ, ಹೋಟೆಲ್, ಬಾರ್ ಇತ್ಯಾದಿ |
| 11 | ಆರ್ಮ್ಸ್ ಪರವಾನಿಗೆ ಮತ್ತು ನವೀಕರಣ ಪರಿಶೀಲನೆ |
| 12 | ಮಿಸ್ಸಿಂಗ್ ದಾಖಲೆಗಳ ವರದಿ, ದಾಖಲಾತಿ, ಮೊಬೈಲ್ ಫೋನ್ ಇತ್ಯಾದಿ |
| 13 | ಕೆಲಸದಾಳು ಪರಿಶೀಲನೆ ಪೊಲೀಸ್ ಗಳ ಕೀಪಿಂಗ್ ಮನೆ /ಪ್ರಮಾಣಪತ್ರ |
| 14 | ಸಂಸ್ಥೆಗಳು ಪ್ರಮಾಣಪತ್ರ ಪರಿಶೀಲನೆ ಪೊಲೀಸ್ ಕಂಪನಿಗಳ / |
| 15 | ಮದುವೆ ಮೈತ್ರಿಗಳ ಪೊಲೀಸ್ ಪರಿಶೀಲನೆ ಪ್ರಮಾಣಪತ್ರ |
| 16 | ಸರ್ಕಾರಿ ದಿನಗೂಲಿ ಕೆಲಸ, ತರಬೇತಿ ಉದ್ಯಮಗಳ ಸಾರ್ವಜನಿಕ / ಪರಿಶೀಲನೆ ಪೊಲೀಸ್ ಗಳಿಗಾಗಿ ಶಿಷ್ಯವೃತ್ತಿ ತರಬೇತಿ / ಕೆಲಸಗಾರು .ಪ್ರಮಾಣಪತ್ರ |
| 17 | ಕೂಲಿಗಳು ವರ್ಗ / ಲೋಡರ್ ನಿಲ್ದಾಣದಲ್ಲಿ ವಿಮಾನ /**IV** ಭದ್ರತಾ ಸಿಬ್ಬಂದಿ ಪ್ರಮಾಣಪತ್ರ ಪರಿಶೀಲನೆ ಪೊಲೀಸ್ ಗಳಿಗಾಗಿ ಮೇಲ್ವಿಚಾರಕ / (ಮಾತ್ರ ಅಭ್ಯರ್ಥಿಗಳು ಪ್ರತ್ಯೇಕ) |
| 18 | ಪಿವಿಸಿ ಕೇಂದ್ರ/ರಾಜ್ಯ ಸರ್ಕಾರದ ಉದ್ಯೋಗಿಗಳು ವಿನಂತಿ ನೇರವಾಗಿ ಪಡೆಯುವುದು. |
| 19 | ಪೊಲೀಸ್ ಸ್ಪಷ್ಟೀಕರಣ ಪ್ರಮಾಣ ವಿದೇಶಕ್ಕೆ ಹೋಗುವವರಿಗೆ ಅಧ್ಯಯನ) ವಿದೇಶಿ / (ವೀಸಾ ಪ್ರಮಾಣ ಸ್ಪಷ್ಟೀಕರಣ ಪೊಲೀಸ್ ಪ್ರಜೆಗಳಿಗೆ |
| 20 | ಫಿಂಗರ್ ಪ್ರಿಂಟ್ ಧೃಡೀಕರಣ |
| 21 | ಟಿಬೆಟಿಯನ್ನರು ಭಾರತಕ್ಕೆ ಮರಳಲು ನಿರಾಪೇಕ್ಷಣ ಅನುಮತಿ |